## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 62 |
| ಸದಸ್ಯರ ಹೆಸರು | ಡಾ. ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 15-07-2024 |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮೂಲಭೂತ ಸೌಕರ್ಯ ಸುಧಾರಣೆಗೆ ರೂಪಿಸಿರುವ ಯೋಜನೆಗಳೇನು ಮತ್ತು ಈ ಕಾಲೇಜುಗಳಿಗೆ 2023-24ನೇ ಸಾಲಿನಲ್ಲಿ ಒದಗಿಸಿದ ಅನುದಾನ ಎಷ್ಟು;</td><td>ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮೂಲಭೂತ ಸೌಕರ್ಯಗಳ ಸುಧಾರಣೆಗಾಗಿ ಸಾಮಾನ್ಯ ಯೋಜನೆ, ವಿಶೇಷ ಅಭಿವೃದ್ಧಿ ಯೋಜನೆ ಮತ್ತು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳನ್ನು ರೂಪಿಸಲಾಗಿದೆ. ಸದರಿ ಯೋಜನೆಗಳಡಿಯಲ್ಲಿ ವಿವಿಧ ಮೂಲಭೂತ ಸೌಕರ್ಯಗಳಿಗಾಗಿ 2023-24ನೇ ಸಾಲಿನಲ್ಲಿ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.<br><br>(ರೂ.ಲಕ್ಷಗಳಲ್ಲಿ)<br><br>
<table>
<tr><th>ಕ್ರ.ಸಂ</th><th>ಲೆಕ್ಕಶೀರ್ಷಿಕೆ</th><th>ಯೋಜನೆ</th><th>2023-24ನೇ ಸಾಲಿನಲ್ಲಿ ಸರ್ಕಾರದಿಂದ ಒದಗಿಸಲಾದ ಅನುದಾನ</th></tr>
<tr><td>1</td><td>4202-01-203-1-01-132</td><td>General</td><td>14075.25</td></tr>
<tr><td>2</td><td>4202-01-203-1-01-133</td><td>SDP</td><td>2923.75</td></tr>
<tr><td>3</td><td>4202-01-203-1-01-135</td><td>SDP- SCP</td><td>1125.75</td></tr>
<tr><td>4</td><td>4202-01-203-1-01-136</td><td>SDP- TSP</td><td>375.25</td></tr>
<tr><td>5</td><td>4202-01-203-1-01-422</td><td>SCP</td><td>3650.00</td></tr>
<tr><td>6</td><td>4202-01-203-1-01-423</td><td>TSP</td><td>1850.00</td></tr>
<tr><td colspan="3">TOTAL Rs.</td><td>24000.00</td></tr>
</table></td></tr>
<tr><td>(ಆ)</td><td>ಸರ್ಕಾರ ಒದಗಿಸಿದ ಅನುದಾನವನ್ನು ಬಳಕೆ ಮಾಡದಿರುವ ಪದವಿ ಕಾಲೇಜುಗಳು ಯಾವುವು; ಎಷ್ಟು ಮೊತ್ತದ ಅನುದಾನವನ್ನು ಸರ್ಕಾರಕ್ಕೆ ಹಿಂತಿರುಗಿಸಲಾಗಿದೆ;</td><td>ಸರ್ಕಾರದಿಂದ ಒದಗಿಸಲಾಗಿರುವ ರೂ.24000.00ಲಕ್ಷಗಳ ಅನುದಾನದ ಪೈಕಿ ರೂ.342.59ಲಕ್ಷಗಳನ್ನು ಹಿಂತಿರುಗಿಸಲಾಗಿದೆ.</td></tr>
<tr><td>(ಇ)</td><td>ಸರ್ಕಾರದ ಅನುದಾನ ಬಳಸದೇ ನಿರ್ಲಕ್ಷ್ಯ ತೋರಿರುವ ಪದವಿ ಕಾಲೇಜುಗಳ ಪ್ರಾಚಾರ್ಯರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td><td>2023-24ನೇ ಸಾಲಿನಲ್ಲಿ ಸರ್ಕಾರದಿಂದ ಒದಗಿಸಲಾದ ಅಭಿವೃದ್ಧಿ ಅನುದಾನವನ್ನು ನೇರವಾಗಿನಿರ್ಮಾಣ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದ್ದು, ಸರ್ಕಾರಿ ಪದವಿ ಕಾಲೇಜುಗಳ ಪ್ರಾಚಾರ್ಯರಿಗೆ ಯಾವುದೇ ಅನುದಾನ ಇಲಾಖೆಯಿಂದ ಬಿಡುಗಡೆ ಮಾಡುತ್ತಿಲ್ಲವಾದ್ದರಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.</td></tr>
<tr><td>(ಈ)</td><td>ಪೂರ್ಣಕಾಲಿಕ ಪ್ರಾಚಾರ್ಯರು ನೇಮಕವಾಗದ ಕಾರಣ ಅನುದಾನ ಸದ್ಬಳಕೆ ಮತ್ತು ಶೈಕ್ಷಣಿಕ ಚಟುವಟಿಕೆಗಳು ಕುಂಠಿತಗೊಳ್ಳಲು ಕಾರಣವೇನು;</td><td>ಪೂರ್ಣಕಾಲಿಕ ಪ್ರಾಚಾರ್ಯರು ನೇಮಕವಾಗದ ಕಾರಣ ಅನುದಾನ ಸದ್ಬಳಕೆ ಮತ್ತು ಶೈಕ್ಷಣಿಕ ಚಟುವಟಿಕೆಗಳು ಕುಂಠಿತಗೊಂಡಿರುವುದಿಲ್ಲ. ಸೇವಾ ಹಿರಿತನದ ಆಧಾರದಲ್ಲಿ ಪ್ರಭಾರ ಪ್ರಾಂಶುಪಾಲರುಗಳು ಕರ್ತವ್ಯ ನಿರ್ವಹಿಸಿರುತ್ತಾರೆ.</td></tr>
</table>

| | | |
|---|---|---|
| (ಉ) | ಪೂರ್ಣಕಾಲಿಕ ಪ್ರಾಚಾರ್ಯರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವುದು ಯಾವಾಗ ? | ಇಲಾಖೆಯಲ್ಲಿ ಖಾಲಿ ಇರುವ 310 ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿತ್ತು. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಸಲ್ಲಿಸಿರುತ್ತದೆ. ಸದರಿ ಮೆರಿಟ್ ಪಟ್ಟಿಯನ್ನು ಇಲಾಖಾ ಮುಖ್ಯಸ್ಥರಿಗೆ ಕಳುಹಿಸಿ ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರ)ಹುದ್ದೆಗಳ ನೇಮಕಾತಿ (ಸ್ನಾತಕ ಶಿಕ್ಷಣ) (ವಿಶೇಷ) ನಿಯಮಗಳೂ 2020ರ ನಿಯಮ-4ರನ್ವಯ ಕಾಲೇಜು ಶಿಕ್ಷಣ ಆಯುಕ್ತರ ಅಧ್ಯಕ್ಷತೆಯಲ್ಲಿನ ಆಯ್ಕೆ ಪ್ರಾಧಿಕಾರವು ಮೆರಿಟ್ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಶೈಕ್ಷಣಿಕ/ಮೀಸಲಾತಿ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ, ಇಲಾಖೆಯಲ್ಲಿ ಪ್ರಕ್ರಿಯೆ ಕೈಗೊಳ್ಳಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಇಡಿ 85 ಹೆಚ್‌ಪಿಸಿ 2024)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಡಾ.ಎಂ.ಸಿ ಸುಧಾಕರ್ ಎಂ.ಡಿ.ಎಸ್
ಉನ್ನತ ಶಿಕ್ಷಣ ಸಚಿವರು